# ‘ಡಿಜಿಟಲ್’ ಆಕ್ರಮಣ

ಡಿಜಿಟಲ್ ತಂತ್ರಜ್ಞಾನ ನಮ್ಮ ಬದುಕನ್ನು ಆಕ್ರಮಿಸುತ್ತಿರುವ ಬಗ್ಗೆ ಹಲವು ಪ್ರಶ್ನೆಗಳಿವೆ. ತಂತ್ರಜ್ಞಾನ ನಮ್ಮ ಬದುಕಿಗೆ ಒದಗಿಸುತ್ತಿರುವ ಅಚ್ಚರಿಗಳ ಸುಖಗಳಲ್ಲಿ ಮುಳುಗೇಳುತ್ತಿರುವಾಗಲೇ ‘ಹೈ ಟೆಕ್’ ಅಪರಾಧಗಳ ಸುಳಿಯೊಳಗೆ ಸಿಲುಕಿಕೊಳ್ಳುವ ಸ್ಥಿತಿ ಇದು. ಪರರ ಮೈಥುನ ಅಥವಾ ಲೈಂಗಿಕ ಅಂಗಾಂಗಗಳ ದರ್ಶನದಿಂದ ಸುಖ ಪಡೆಯುವ ಪ್ರವೃತ್ತಿ ನಮ್ಮ ಸಮಾಜವನ್ನು ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತಿರುವ ಆತಂಕದ ಸ್ಥಿತಿಯಲ್ಲಿ ಇಂದು ನಾವಿದ್ದೇವೆ.



ರಾಜ್ಯ ವಿಧಾನಸಭೆ ಕಲಾಪಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಮೊಬೈಲ್‌ನಲ್ಲಿ ಅಶ್ಲೀಲ ದೃಶ್ಯಾವಳಿ ವೀಕ್ಷಿಸಿದ ಆರೋಪಕ್ಕೆ ಗುರಿಯಾದ ಮೂವರು ಸಚಿವರು ರಾಜಿನಾಮೆ ನೀಡಬೇಕಾಗಿಬಂದ ಪ್ರಸಂಗ ನಾಚಿಕೆಗೇಡಿನದು. ಈ ಮೂವರ (ಲಕ್ಷ್ಮಣ ಸವದಿ, ಕೃಷ್ಣ ಪಾಲೆಮಾರ್ ಹಾಗೂ ಸಿ.ಸಿ. ಪಾಟೀಲ) ಪೈಕಿ ಸಿ.ಸಿ. ಪಾಟೀಲ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಹೊಂದಿದ್ದವರು ಎಂಬುದಂತೂ ದೊಡ್ಡ ವ್ಯಂಗ್ಯ.

ಈ ಸಂದರ್ಭದಲ್ಲೇ ಡಿಜಿಟಲ್ ತಂತ್ರಜ್ಞಾನ ನಮ್ಮ ಬದುಕನ್ನು ಆಕ್ರಮಿಸುತ್ತಿರುವ ಬಗೆಗೆ ಹಲವು ಪ್ರಶ್ನೆಗಳೇಳುತ್ತವೆ. ನಿಜ, ತಂತ್ರಜ್ಞಾನ ನಮ್ಮ ಬದುಕಿಗೆ ಅನೇಕ ಸೌಲಭ್ಯಗಳನ್ನು ತಂದುಕೊಟ್ಟಿದೆ. ಅಭಿವ್ಯಕ್ತಿಯ ಆಯಾಮಗಳು ಹೆಚ್ಚಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಅಪಾರ ಜ್ಞಾನಸಂಪತ್ತು ಕೈಬೆರಳ ತುದಿಯಲ್ಲೇ ಲಭ್ಯ. ಇದರ ಜತೆಗೇ ಮತ್ತೊಂದು ವಿರೂಪ ಮುಖವೂ ಇದೆ. ಅಶ್ಲೀಲ ಮಾಹಿತಿಗಳ ಲಭ್ಯತೆಯನ್ನೂ ಡಿಜಿಟಲ್ ತಂತ್ರಜ್ಞಾನ ಈಗ ಸುಲಭಸಾಧ್ಯವಾಗಿಸಿದೆ. ಜೊತೆಗೆ ಇಂತಹ ಮಾಹಿತಿಗಳನ್ನು ಮೊಬೈಲ್‌ಗಳಲ್ಲಿ ಹರಿದಾಡಲು ಬಿಡುವುದೂ ಸುಲಭವಾಗಿದೆ. ವಿಧಾನಸಭೆಯಲ್ಲಿನ ನಾಚಿಕೆಗೇಡಿನ ಪ್ರಕರಣ ಇದಕ್ಕೆ ತಾಜಾ ಉದಾಹರಣೆ.

ತಂತ್ರಜ್ಞಾನ ನಮ್ಮ ಬದುಕಿಗೆ ಒದಗಿಸುತ್ತಿರುವ ಅಚ್ಚರಿಗಳ ಸುಖಗಳಲ್ಲಿ ಮುಳುಗೇಳುತ್ತಿರುವಾಗಲೇ ‘ಹೈ ಟೆಕ್’ ಅಪರಾಧಗಳ ಸುಳಿಯೊಳಗೆ ಸಿಲುಕಿಕೊಳ್ಳುವ ಸ್ಥಿತಿ ಇದು. ಪರರ ಮೈಥುನ ಅಥವಾ ಲೈಂಗಿಕ ಅಂಗಾಂಗಗಳ ದರ್ಶನದಿಂದ ಸುಖ ಪಡೆಯುವ ಪ್ರವೃತ್ತಿ (ಈ ಪ್ರವೃತ್ತಿಗೆ ಇಂಗ್ಲಿಷ್‌ನಲ್ಲಿ ‘ವಾಯರಿಸಂ’ ಎನ್ನುತ್ತಾರೆ) ನಮ್ಮ ಸಮಾಜವನ್ನು ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತಿರುವ ಆತಂಕದ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳ ಪತನದ ಜೊತೆಗೆ ನೈತಿಕ ಅಧಃಪತನದತ್ತ ಸಾಗುವ ಹಾದಿ ಇದು. ಹೆಣ್ಣಿನ ದೇಹವನ್ನು ಪುರುಷನ ಲೋಲುಪತೆಗಾಗಿ ಸರಕಾಗಿಸುವಂತಹ ಇಂತಹ ವಿದ್ಯಮಾನಗಳು ಮಹಿಳೆಯ ಘನತೆಯನ್ನು ಕುಗ್ಗಿಸಿ ಅಪಮೌಲ್ಯೀಕರಿಸುವಂತಹದ್ದೂ ಹೌದು.

ಜಾಗತೀಕರಣದ ಈ ಯುಗದಲ್ಲಿ ಲೈಂಗಿಕತೆಯೂ ಉದ್ಯಮವಾಗಿ ವಿಸ್ತರಣೆ ಆಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಕಾಮಪ್ರಚೋದಕ ಸಾಹಿತ್ಯ, ಸಿನಿಮಾಗಳಿಗೆ (ಪೋರ್ನೋಗ್ರಫಿ) ಭಾರತದಲ್ಲಿ ಕಾನೂನಿನ ಅನುಮೋದನೆ ಇಲ್ಲದಿದ್ದರೂ ವ್ಯಾಪಕವಾಗಿ ಅದು ಲಭ್ಯವಿದೆ ಎಂಬುದೇ ವಿಪರ್ಯಾಸ. 2008ರಲ್ಲಿ ‘ಇಂಡಿಯಾ ಟುಡೆ’ ಮ್ಯಾಗಜೀನ್ ನಡೆಸಿದ ಸಮೀಕ್ಷೆಯ ಪ್ರಕಾರ, ಭಾರತದ ನಗರಗಳಲ್ಲಿ ಐವರು ಪುರುಷರಲ್ಲಿ ಮೂವರು ಹಾಗೂ ಐವರು ಮಹಿಳೆಯರಲ್ಲಿ ಒಬ್ಬರು ಕಾಮಪ್ರಚೋದಕ ಸಾಹಿತ್ಯವನ್ನು ಅನುಮೋದಿಸಿದ್ದರು.

ಈ ಹಿನ್ನೆಲೆಯಲ್ಲಿ ‘ವಾಯರಿಸಂ’ ವಿರುದ್ಧ ಸೆಣಸುವುದೇ ಇಂದಿನ ದೊಡ್ಡ ಸವಾಲು. ಕುಟುಂಬ, ಸಮಾಜ, ಸರ್ಕಾರ, ಕಾನೂನು ನಿರ್ಮಾಪಕರು– ಹೀಗೆ ವಿವಿಧ ಹಂತಗಳಲ್ಲಿ ಇದನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕಾದ ಸನ್ನಿವೇಶದಲ್ಲಿ ನಾವಿದ್ದೇವೆ. ಇಲ್ಲದಿದ್ದಲ್ಲಿ ಸಮಾಜವನ್ನು ಬೆಸೆದಿರುವ ಮೌಲ್ಯಗಳು ನಾಶವಾಗುತ್ತಾ ಸಾಮಾಜಿಕ ಬಂಧ ಸಡಿಲವಾಗುತ್ತದೆ. ಈ ನಿಟ್ಟಿನಲ್ಲಿ ತಂತ್ರಜ್ಞಾನ ತಂದೊಡ್ಡುತ್ತಿರುವ ಅಪಾಯಗಳನ್ನು ಕಡಿಮೆ ಮಾಡಲು, ತಂತ್ರಜ್ಞಾನವನ್ನು ನಾವು ನಿರ್ವಹಿಸುವ ಬಗೆಯಲ್ಲೇ ಬದಲಾವಣೆಗಳಾಗಬೇಕಿದೆ. ಸೆಲ್ ಫೋನ್‌ಗಳ ತಂತ್ರಜ್ಞಾನ ದಿನೇ ದಿನೇ ಸುಧಾರಣೆಯಾಗುತ್ತಿದೆ. ಆದರೆ ಈ ತಂತ್ರಜ್ಞಾನದ ಬಳಕೆಯಲ್ಲಿ ಹೊಣೆಗಾರಿಕೆ ಹೊಂದಬೇಕಾದುದು ಅಷ್ಟೇ ಅವಶ್ಯ ಎಂಬುದನ್ನು ಜನ ಮನಗಾಣುತ್ತಿಲ್ಲ. ಇದನ್ನು ಕಟ್ಟುನಿಟ್ಟಾಗಿ ಅರಿತಿರಬೇಕಿದ್ದ ಕಾನೂನು ನಿರ್ಮಾಪಕರಾದ ಸಚಿವರೇ ಈಗ ಹಗರಣದಲ್ಲಿ ಸಿಲುಕಿಕೊಂಡಿರುವುದು ದೊಡ್ಡ ದುರಂತ.

ಗೆಳತಿಯ ಅಶ್ಲೀಲ ಚಿತ್ರಗಳನ್ನು ಮೊಬೈಲ್‌ನಲ್ಲಿ ರವಾನೆ ಮಾಡುವಂತಹದ್ದು ಅಥವಾ ಅಂತರ್ಜಾಲಕ್ಕೆ ಸೇರಿಸುವಂತಹ ಪ್ರಸಂಗಗಳು ಈ ಹಿಂದೆ ಹಲವು ಬಾರಿ ವರದಿಯಾಗಿವೆ. ಇಂತಹ ಸೈಬರ್ ಅಪರಾಧಗಳನ್ನು ದಕ್ಷವಾಗಿ ನಿರ್ವಹಿಸಲು ಬೇಕಾದ ವಿಧಿವಿಧಾನಗಳನ್ನು ನಿರಂತರವಾಗಿ ರೂಪಿಸುತ್ತಲೇ ಇರಬೇಕಾಗುತ್ತದೆ. ಸೈಬರ್ ಅಪರಾಧ ತಡೆಗೆ ಕಾನೂನುಗಳನ್ನು ಹೆಚ್ಚು ಸೂಕ್ಷ್ಮವಾಗಿಸಿ ತರಬೇತಿಗಳನ್ನು ನೀಡುವುದೂ ಅಗತ್ಯ.

ಅಶ್ಲೀಲ ಮತ್ತು ಕಾಮಪ್ರಚೋದಕ ವೆಬ್‌ಗಳನ್ನು ‘ತಾಂತ್ರಿಕವಾಗಿ ನಿಷೇಧಿಸುವ’ ಕ್ರಮಗಳ ಕುರಿತೂ ಆಲೋಚಿಸಬಹುದು. ಆದರೆ ಒಂದು ವಿಷಯ ನಮಗೆ ನೆನಪಿರಬೇಕು. ಅಂತರ್ಜಾಲದ ಮೇಲೆ ವಿಧಿಸುವ ಯಾವುದೇ ವಿಧದ ಸೆನ್ಸಾರ್‌ಷಿಪ್ ‘ರಾಜಕೀಯ ಸೆನ್ಸಾರ್‌ಷಿಪ್’ ಆಗಿಬಿಡಬಹುದಾದ ಭೀತಿ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನವನ್ನು ನಾವು ನಿರ್ವಹಿಸುವ ಬಗೆಯಲ್ಲೇ ಬದಲಾವಣೆಗಳು ಬರಬೇಕಿವೆ. ಸಕಾರಾತ್ಮಕ ಚಟುವಟಿಕೆಗಳು ಹಾಗೂ ‘ಜನರೇಷನ್ ನೆಕ್ಸ್ಟ್’ನ ಏಳಿಗೆಯ ಸಾಧನವಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಇದಕ್ಕಾಗಿ ಸೂಕ್ತ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಕಾನೂನು ಕ್ರಮ ಕೈಗೊಳ್ಳುವತ್ತ ನಮ್ಮ ಗಮನ ಹರಿಯಬೇಕು.

■ ಸಿ.ಜಿ.ಮಂಜುಳಾ